# ೨

# ಒಬ್ಬಾತನು ನಿನ್ನನ್ನು ಪ್ರೀತಿಸುತ್ತಾನೆ

ನೀವು ಮಾಡಬೇಕಾದದ್ದು ಏನು ಎಂಬುದರ ಮೇಲೆ ಈ ಪುಸ್ತಕದಲ್ಲಿ ಪ್ರಾಧಾನ್ಯತೆಯಿರುವುದು. ಆದರೆ ನಾವು ಮಾಡುವಂಥದ್ದು ಯಾವುದೇ ರೀತಿಯಲ್ಲಿ ನಮಗಾಗಿ ದೇವರು ಮಾಡಿದ್ದಕ್ಕೆ ಹೋಲಿಕೆಯಾಗಿರುವುದು ಎಂಬ ಪ್ರಭಾವವನ್ನು ಬೀರಲು ನಾನು ಬಯಸುವದಿಲ್ಲ. ಈ ಪಾಠವು ದೇವರ ಪ್ರೀತಿಯ ಮೇಲೆ ಇರುವುದು. ಅದು ಈ ವಿಷಯವನ್ನು ಪೂರ್ತಿಯಾಗಿ ಹೇಳದಿದ್ದರೂ ಇದು ಈ ಉತ್ತೇಜಿಸುವ ವಿಷಯವನ್ನು ಪರಿಚಯ ಮಾಡಿಕೊಡುವುದು.

## ಪಾಪದಲ್ಲಿ ನಾಶವಾದದ್ದು

ನಮಗಾಗಿರುವ ದೇವರ ಪ್ರೀತಿಯನ್ನು ಮೆಚ್ಚಿಕೊಳ್ಳಲು, ಆ ಪ್ರೀತಿಗಾಗಿ ನಮಗಿರುವ ಅಗತ್ಯತೆಯನ್ನು ಮೊದಲು ನಾವು ನೋಡತಕ್ಕದ್ದು. ದೇವರು ತನ್ನ ಪ್ರೀತಿಯನ್ನು ತೋರಿಸುವ ಮೊದಲು ಮಾನವ ಜನಾಂಗವು ಪಾಪದಲ್ಲಿ ನಾಶವಾಗಿತ್ತು. ನಿರೀಕ್ಷೆಯಿಲ್ಲದ್ದು, ಸಹಾಯ ಹೀನವಾದದ್ದೂ ಆಗಿತ್ತು.

"ಪಾಪದಲ್ಲಿ ನಾಶವಾದದ್ದು" ಎಂದು ನಾನು ಹೇಳುವಾಗ ಆದಾಮನ ಪಾಪವನ್ನು ಸಂಬಂಧಿಸಿ ಅಲ್ಲ, ಆದರೆ ವೈಯಕ್ತಿಕ ಪಾಪವನ್ನು ಸಂಬಂಧಿಸಿ ಹೇಳುತ್ತೇನೆ. ಮಗುವು ಆದಾಮನ ಪಾಪ ದೋಷದೊಂದಿಗೆ ಹುಟ್ಟಿದೆಯೆಂದು ಕೆಲವರು ನಂಬುತ್ತಾರೆ. ಆದರೆ ಶಿಶುವು ಶುದ್ಧವಾಗಿ ಜನಿಸುತ್ತದೆಂದು ಬೈಬಲ್ ಬೋಧಿಸುತ್ತದೆ. "ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 18:3) ಎಂದು ಯೇಸು ಹೇಳಿದ್ದಾನೆ. "ಪರಲೋಕ ರಾಜ್ಯವು ಇಂಥವರದೇ ಆಗಿದೆ" (ಮತ್ತಾಯ 19:14) ಎಂದು ಚಿಕ್ಕಮಕ್ಕಳನ್ನು ಸಂಬಂಧಿಸಿ ಪುನಃ ಆತನು ಹೇಳಿದನು.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಪಾಪಗಳಿಗೆ ಜವಾಬ್ದಾರನಾಗಿದ್ದಾನೆ - ಅವನ ತಂದೆಯ ಪಾಪಗಳಿಗಾಗಿ ಅಲ್ಲ ಆದರೆ ತನ್ನ ಸ್ವಂತ ಪಾಪಗಳಿಗಾಗಿ ಎಂದು ಯೆಹೆಜ್ಕೇಲ ಪ್ರವಾದಿಯು ಒತ್ತಿ ಹೇಳಿದ್ದಾನೆ:

> ಪಾಪ ಮಾಡುವವನೇ ಸಾಯುವನು; ಮಗನು ತಂದೆಯ ದೋಷ ಫಲವನ್ನು ಅನುಭವಿಸನು, ತಂದೆಯು ಮಗನ ದೋಷ ಫಲವನ್ನು ಅನುಭವಿಸನು; ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ (ಯೆಹೆಜ್ಕೇಲ 18:20).


ನಿಮ್ಮ ತಂದೆಯ ಪಾಪಗಳ *ಪರಿಣಾಮಗಳನ್ನು* ಸ್ವಾಸ್ಥ್ಯವಾಗಿ ಹೊಂದಿ ಕೊಳ್ಳಬಹುದು. ಆದರೆ ನಿಮ್ಮ ತಂದೆಯ ಪಾಪದ *ದೋಷವನ್ನು* ಸ್ವಾಸ್ಥ್ಯವಾಗಿ ಹೊಂದಿ ಕೊಳ್ಳಲಾರಿರಿ.[1] ಆದಾಮನ ಪಾಪದ ಪರಿಣಾಮವನ್ನು - ದೈಹಿಕ ಮರಣವನ್ನು ಅನುಭವಿಸುತ್ತೇವೆ (ಆದಿಕಾಂಡ

3:3). ಆದರೆ ಅವನ ಪಾಪದ ದೋಷವನ್ನು ಸ್ವಾಸ್ಥ್ಯ ವಾಗಿ ಹೊಂದಿಕೊಳ್ಳುವದಿಲ್ಲ.

ನಾವು ಶುದ್ಧರಾಗಿ ಜನಿಸುತ್ತೇವೆ. ನಾವು ದೊಡ್ಡವರಾಗುವಾಗ ತಪ್ಪಿನಿಂದ ಸರಿಯಾದದ್ದನ್ನು ಕಲಿತು ಕೊಳ್ಳುತ್ತೇವೆ. ನಾವು ತಪ್ಪು ಮಾಡುವದನ್ನು ಆಯ್ದು ಕೊಳ್ಳುವಾಗ ಅದು ಪಾಪ. ಕ್ರಮೇಣವಾಗಿ ನಮ್ಮ ಪಾಪಗಳಿಗಾಗಿ ಜವಾಬ್ದಾರ ರಾಗುತ್ತೇವೆ. ಈ "ಜವಾಬ್ದಾರರಾಗುವ ವಯಸ್ಸು" ಭಿನ್ನವಾದ ಜನರಿಗೆ ಭಿನ್ನವಾದ ವಯಸ್ಸಿನಲ್ಲಿ ಬರುತ್ತದೆ, ಹಿನ್ನಲೆಯಲ್ಲಿ, ತರಬೇತಿಯಲ್ಲಿ ಮತ್ತು ಪ್ರಕೃತಿ ಸ್ವಭಾವದಲ್ಲಿ ಭಿನ್ನವಾಗಿರವುದು ಇದಕ್ಕೆ ಕಾರಣ. ಯೆಹೂದ್ಯರು ಇದನ್ನು ಸುಮಾರು ಹದಿಮೂರು ವರ್ಷಗಳ ಪ್ರಾಯಕ್ಕೆ ನಿಗದಿ ಪಡಿಸಿದ್ದರು.[2] ಆದರೆ ವ್ಯಕ್ತಿಗಳ ಮೇಲೆ ಅವಲಂಭಿಸಿ ಕೆಲವು ವರ್ಷ ಹೆಚ್ಚು ಕಡಿಮೆಯಾಗುವುದು.


ಹೀಗೆ, ವ್ಯಕ್ತಿಯು ಬಾಲ್ಯ ಪ್ರಾಯದಲ್ಲಿ ಸಾಯದಿದ್ದರೆ, ಅವನು ಪಾಪ ಮಾಡುವವನು ಮತ್ತು ಪಾಪಿಯಾಗಿರುವನು. "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ; ... ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾಪುರ 3:10, 23).

"ಪಾಪ" ಎಂಬ ಪದವನ್ನು ನಾವು ಸ್ಪಷ್ಟಪಡಿಸುವ ಅಗತ್ಯತೆಯಿದೆ. "ಪಾಪ" ಎಂದು ಭಾಷಾಂತರಿಸಲ್ಪಟ್ಟ ಗ್ರೀಕ ಪದದ ಅರ್ಥ "ಗುರಿ ತಪ್ಪುವುದು" ಎಂದಾಗುತ್ತದೆ. ಗ್ರೀಕ ಬಿಲ್ಲುಗಾರನು ಗುರಿಯನ್ನು ತಪ್ಪಿಸಿಕೊಂಡಾಗ ಅವನು "ಪಾಪ ಮಾಡಿದನು" ಎಂದು ಹೇಳಲ್ಪಡುತ್ತಿತ್ತು. ಆತ್ಮಿಕ ಸಮಾಂತರವನ್ನು ಗುರುತಿಸಲು, "ಗುರುತನ್ನು" (ಗುರಿಯನ್ನು) ದೇವರ ಚಿತ್ತದಂತೆ ಯೋಚಿಸಿರಿ. ರೋಮಾಪುರ 3:23 "ಎಲ್ಲರೂ ಪಾಪ ಮಾಡಿದ್ದಾರೆ" ಎಂದು ಘೋಷಿಸಿದನಂತರ, "ದೇವರ ಮಹಿಮೆಯನ್ನು *ಹೊಂದದೆ* ಹೋಗಿದ್ದಾರೆ" ಎಂಬುದನ್ನು ಕೂಡಿಸುತ್ತದೆ.[3]




"ಪಾಪ"ಕ್ಕಾಗಿ ಬೈಬಲಿನಲ್ಲಿ ಉಪಯೋಗಿಸಿದ ಇನ್ನೊಂದು ಪದವು "ಅತಿಕ್ರಮಿಸುವುದು" (ಉಲ್ಲಂಘಿಸುವುದು) ಎಂಬುದು. ನಮ್ಮ ಹಿಂದಿನ ಪಾಠದಲ್ಲಿ "ಅತಿಕ್ರಮಗಳ ಕಾರಣಕ್ಕಾಗಿ" ಧರ್ಮಶಾಸ್ತ್ರವು ಸೇರಿಸಲಾಯಿತು ಎಂದು ನೋಡಿದ್ದೇವೆ (ಗಲಾತ್ಯ 3:19). "Transgress" ಎಂಬ ಇಂಗ್ಲೀಷ್ ಪದವು (ಗ್ರೀಕ ಪದದಂತೆಯೇ) "ಒಂದು ಹೆಜ್ಜೆ ದಾಟಿ ಹೋಗುವ"[4] ಎಂಬ ಮೂಲ ಅರ್ಥ ಕೊಡುತ್ತದೆ. ಈ ಭಾವನೆಯನ್ನು ಪ್ರಕಟಿಸುವ ವಾಕ್ಯ ಭಾಗವು 2 ಯೋಹನ 9ಎ: "ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ (ಬಹಳ ದೂರ ಹೋಗುವವನಿಗೆ) ದೇವರ ಅನ್ಯೋನ್ಯ ತೆಯಿಲ್ಲ." "ಅತಿಕ್ರಮಿಸಿ ಹೋಗುವವರಿಗೆ ಮತ್ತು ಬೋಧನೆಯಲ್ಲಿ ಇರದೆ ಹೋಗುವವರಿಗೆ ದೇವರು ಇರುವದಿಲ್ಲ" ಎಂದು KJV ಯಲ್ಲಿದೆ.

ಬಿಲ್ಲು ವಿದ್ಯೆಯ ಉದಾಹರಣೆಯನ್ನು ಮುಂದುವರಿಸಿ ಅತಿಕ್ರಮಣವನ್ನು ಗುರಿದಾಟಿ ಬಾಣ ಎಸೆಯುವಿಕೆಯಂತೆ - ದೇವರ ಚಿತ್ತವನ್ನು ಮೀರಿ ಮುಂದಕ್ಕೆ ಹೋಗುವಂತೆ ನಾವು ಯೋಚಿಸಬಹುದು.



"ಮಾಡುವ, ಬಿಡುವ ಪಾಪಗಳೆಂದು" ಕೆಲವರು ಮಾತನಾಡುತ್ತಾರೆ. "ಬಿಡುವ ಪಾಪವು" ನಾವು ಮಾಡಲೇ ಬೇಕಾದದ್ದನ್ನು ಮಾಡದೇ ಹೋಗುವಂಥದ್ದು (ದೇವರ ನಿರೀಕ್ಷೆಗಳನ್ನು ತಲುಪದೇ ಹೋಗುವುದು). "ಮಾಡುವ ಪಾಪವು" ನಾವು ಮಾಡ ಬಾರದೇ ಇರುವದನ್ನು ಮಾಡುವದಕ್ಕೆ ಸಂಬಂಧಿಸಿದೆ (ನಮಗಾಗಿ ದೇವರು ನೇಮಿಸಿದ ಮೇರೆಗಳನ್ನು ದಾಟಿ ಹೋಗುವುದು).[5]

"ಪಾಪ" ಎಂಬುದಕ್ಕೆ ಇನ್ನೊಂದು ಏಕಾರ್ಥದ ಪದವು "ಅಪರಾಧ" ಎಂಬುದು.[6] ಯಾಕೋಬ 3:6 ರಲ್ಲಿ "ಪಾಪ ಪ್ರಪಂಚದ" ಬಗ್ಗೆ ಹೇಳಲಾಗಿದೆ. "ಅಪರಾಧ" ಎಂಬುದಾಗಿ ಭಾಷಾಂತರಿಸಿದ ಪದವು ಅನ್ಯಾಯದ ಭಾವನೆಯನ್ನು ಕೊಡುತ್ತದೆ. "ನಾವೆಲ್ಲರೂ ಕುರಿಗಳಂತೆ ದಾರಿ ತಪ್ಪಿ ತೊಳಲುತ್ತಿದ್ದೆವು. ಪ್ರತಿಯೊಬ್ಬನು ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷ ಫಲವನ್ನು ಯೆಹೋವನು ಅವನ ಮೇಲೆ ಹಾಕಿದನು" ಎಂದು ಯೆಶಾಯ 53:6ರಲ್ಲಿ ಅಪರಾಧ ಪ್ರಕಟಿಸಲ್ಪಟ್ಟಿದೆ. "ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು" ಎಂಬ ಮಾತುಗಳನ್ನು ಗಮನಿಸಿರಿ. ದೇವರ ಮಾರ್ಗದಲ್ಲಿ ಹೋಗುವದರ ಬದಲು ತನ್ನ ಸ್ವಂತ ಮಾರ್ಗದಲ್ಲಿ ಹೋಗುವದಕ್ಕೆ ಇದು ಸಂಬಂಧಿಸಿದೆ. ಬಿಲ್ಲುಗಾರನ ದೃಷ್ಟಾಂತವನ್ನು ಇದಕ್ಕೆ ನಾವು ಅನ್ವಯಿಸಿದರೆ, ಬಿಲ್ಲುಗಾರನು ಬಾಣವನ್ನು ಎಸೆಯುವಾಗ ಗುರಿಯನ್ನು ಸಂಪೂರ್ಣ ವಾಗಿ ಅಲಕ್ಷಿಸಿದಂತೆ ನಾವು ಚಿತ್ರಿಸಬಹುದು.



ಕೆಲವೊಂದು ಜನರಿಗೆ ದೇವರನ್ನು ಮೆಚ್ಚಿಸುವಂಥದ್ದಕ್ಕೆ "ಗುರಿಯನ್ನಿಟ್ಟು ಕೊಂಡಿರುವಂಥದ್ದಲ್ಲ," ಆದರೆ ಸೋತು ಹೋಗುವಂಥದ್ದಾಗಿರುತ್ತದೆ. ಅವರು ದೇವರಿಗೆ ವಿಧೇಯರಾಗುವೆವೋ ಇಲ್ಲವೋ ಎಂಬುದರ ಬಗ್ಗೆ ಗಮನ ಕೊಡದೇ ಇರುವುದು ಅವರ ಸಮಸ್ಯೆಯಾಗಿರುವುದು. ಅವರು ತಮ್ಮ ಮನಸ್ಸಿಗೆ ಬಂದಂತೆ ಜೀವಿ ಸುವದಕ್ಕೆ ನಿರ್ಧಾರ ಮಾಡಿ ಕೊಂಡಿರುವರು. ಅವರು ಹಟಮಾರಿತನದಿಂದ ತಮ್ಮ ಮಾರ್ಗದಲ್ಲಿಯೇ ಹೋಗುವರು.

ನಿಂತುಕೊಂಡು, ಪಾಪ ಮಾಡುವ ಈ ಮೂರು ಸಾಮಾನ್ಯ ವಿಧಾನಗಳ ಬಗ್ಗೆ ಯೋಚಿಸಿರಿ: ನಾವು ಮಾಡತಕ್ಕದ್ದನ್ನು ಮಾಡದೇ ಇರುವುದು, ತಪ್ಪಾಗಿರುವದೆಂದು ನಾವು ತಿಳಿದು ಕೊಂಡದ್ದನ್ನು ಮಾಡುವುದು, ದೇವರ ಚಿತ್ತವನ್ನು ಸಂಪೂರ್ಣ ವಾಗಿ ಅಲಕ್ಷಿಸುವುದು. ನಾವು ಮಾಡುವಂಥದ್ದರಿಂದ (ಯಾಕೋಬ 4:17), ನಾವು

ಹೇಳುವಂಥದ್ದರಿಂದ (ಮತ್ತಾಯ 12:37) ಹಾಗೂ ನಾವು ಯೋಚಿಸುವಂಥದ್ದರಿಂದ (ಮತ್ತಾಯ 15:19) ನಾವು ಪಾಪ ಮಾಡಬಹುದೆಂಬ ಸಂಗತಿಯನ್ನು ಅದಕ್ಕೆ ಕೂಡಿಸಿರಿ. ಇದೆಲ್ಲವನ್ನೂ ಒಟ್ಟಾಗಿ ಕೂಡಿಸಿ, ಇದು ನಿಮ್ಮ ಸ್ವಂತ ಜೀವನಕ್ಕೆ ಈ ಸತ್ಯಗಳು ಹೇಗೆ ಅನ್ವಯಿಸುವವು ಎಂಬುದನ್ನು ಯೋಚಿಸಿರಿ:

- ನೀವು ಮಾಡತಕ್ಕದ್ದನ್ನು ಎಂದಾದರೂ ಮಾಡದೆ ಹೋಗಿರುವಿರೋ?
- ನೀವು ಹೇಳಬಾರದೇ ಇರುವ ಸಂಗತಿಗಳನ್ನು ಎಂದಾದರೂ ಹೇಳಿದ್ದೀರೋ?
- ದೇವರ ಚಿತ್ತಕ್ಕೆ ವಿರೋಧವಾದದ್ದನ್ನು ನೀವು ಎಂದಾದರೂ ಯೋಚಿಸಿರುವಿರೋ?

ನೀನು ಪಾಪಿಯಾಗಿದ್ದೀಯೆಂದು ಒಪ್ಪಿಕೊಳ್ಳಲು ಸಿದ್ಧನಾಗಿರುವಿಯೋ? ಎಂದು ಸಂಕ್ಷೇಪವಾಗಿ ಕೇಳಬಹುದು. ನಿಮ್ಮ ಕಳೆದು ಹೋದ ಪರಿಸ್ಥಿತಿಯನ್ನು ಒಪ್ಪಿಕೊಳ್ಳು ವವರೆಗೆ ನೀವು ರಕ್ಷಿಸಲ್ಪಡಲು ಸಿದ್ಧರಾಗಿರುವದಿಲ್ಲ.

ನಿಮ್ಮ ಪಾಪ ಭರಿತತೆಯನ್ನು ಅರಿಕೆ ಮಾಡುವುದು ಮುಖ್ಯ. ನಿಮ್ಮ ಸ್ವಂತ ಪಾಪದ ಅಪರಾಧವನ್ನು ನೀವು ತೆಗೆದು ಹಾಕಲು ಯಾವುದೇ ಮಾರ್ಗವಿರುವದಿಲ್ಲ ಎಂದು ಅರ್ಥಮಾಡಿಕೊಳ್ಳುವುದೂ ಮಹತ್ವದ್ದಾಗಿದೆ. ಒಬ್ಬನಿಗೆ ತನ್ನ ಜೀವನದಲ್ಲಿ ಕೆಟ್ಟತನಕ್ಕಿಂತ ಹೆಚ್ಚು ಒಳ್ಳೆಯದು ಇದ್ದರೆ ಒಳ್ಳೆಯದು ಕೆಟ್ಟತನವನ್ನು ರದ್ದು ಪಡಿಸುತ್ತದೆ ಎಂದು ಸಮಾನ್ಯ ತಪ್ಪು ತಿಳುವಳಿಕೆಯಿರುವುದು. ನಾವು ದೇವರಿಗೆ ಅವಿಧೇಯರಾಗಿ ದ್ದೇವೆ ಎಂಬ ಸಂಗತಿಯನ್ನು ಎಷ್ಟೋ ಹೆಚ್ಚಾದ ಒಳ್ಳಯತನವು ಪರಿಹರಿಸಲಾರದು.

ನಿಮ್ಮ ಬಿಲ್ಲುಗಳನ್ನು ನೀವು ಕೊಡದೇ ಬಹಳವಾದ ಸಾಲವನ್ನು ಮಾಡಿಕೊಂಡಿ ರುವಿರೆಂದು ಯೋಚಿಸಿರಿ. ಒಂದು ದಿನ, "ಇದು ಹುಚ್ಚುತನ, ಇಂದಿನಿಂದ ಬಿಲ್ಲುಗಳ ಅವಧಿ ಮುಗಿಯು ಮುಂಚೆ ಎಲ್ಲಾ ಹಣವನ್ನು ಕೊಟ್ಟುಬಿಡುತ್ತೇನೆ" ಎಂದು ತೀರ್ಮಾಣಿಸಿಕೊಳ್ಳುವಿರಿ. ವರ್ಷ ವರ್ಷವೂ ಈ ತೀರ್ಮಾನವನ್ನು ನಂಬಿಗಸ್ಥಿಕೆ ಯಿಂದ ಮುಂದುವರಿಸಿಕೊಂಡು ಹೋಗುವಿರೆಂದು ಕಲ್ಪಿಸಿಕೊಳ್ಳಿರಿ. ಇದು ಮೆಚ್ಚಿಕೆ ಯುಳ್ಳದ್ದೇ. ಆದರೆ ನೀವು ಪ್ರಾರಂಭಿಸಿದ್ದ ಸಾಲದ ಬಗ್ಗೆ ಏನು? ಇಂದಿನ ಬಿಲ್ಲುಗಳನ್ನು ಕೊಡುತ್ತಾ ಹೋಗುವುದು ಹಿಂದಿನ ಸಾಲವನ್ನು ಎಂದೂ ಅಳಿಸಿಬಿಡುವದಿಲ್ಲ.

ಹಾಗೆಯೇ, ನೀವು ಒಳ್ಳೆಯದನ್ನು ಮಾಡುವಾಗ, ಅದು ಮೆಚ್ಚಿ ಕೊಳ್ಳಲ್ಪಡುತ್ತದೆ. ಆದರೆ ಅದನ್ನು ನೀವು ಮಾಡಲೇ "ತಕ್ಕದ್ದೆಂದು" ಬೈಬಲ್ ಬೋಧಿಸುತ್ತದೆ (ಲೂಕ 17:10 ನೋಡಿರಿ). ಎಲ್ಲಾ ಸಮಯಗಳಲ್ಲಿ "ನೀವು ಮಾಡಲೇ ಬೇಕಾದದ್ದನ್ನು" ಮಾಡದೇ ಇದ್ದುದಕ್ಕೆ ಇದು ಪ್ರತಿಯಾಗಿ ಇರುವದಿಲ್ಲ.

ನಾವು ದೇವರಿಗೆ ಅವಿಧೇಯರಾಗಿರುವದರಿಂದ ನಮ್ಮ ಪಾಪಗಳಿಗಾಗಿ ಯಾವುದಕ್ಕೆ ನಾವು ಪಾತ್ರರಾಗಿದ್ದೇವೆ? "ಪಾಪವು ಕೊಡುವ ಸಂಬಳ ಮರಣ" (ರೋಮಾಪುರ 6:23ಎ) ಎಂದು ಬೈಬಲ್ ಸ್ಪಷ್ಟವಾಗಿ ಹೇಳುತ್ತದೆ. "ಮರಣ" ಎಂಬ ಪದವು ಬೈಬಲಿನಲ್ಲಿ "ಬೇರೆ ಮಾಡುವದನ್ನು" ಅನ್ವಯಿಸುತ್ತದೆ. ದೈಹಿಕ ಮರಣವು ದೇಹವನ್ನು ಆತ್ಮದಿಂದ ಬೇರೆ ಮಾಡುವಂಥದ್ದಾಗಿರುತ್ತದೆ (ಯಾಕೋಬ 2:26 ನೋಡಿರಿ). ಪಾಪದ ಕಾರಣದಿಂದ (ಯೆಶಾಯ 59:1, 2 ನೋಡಿರಿ). ಆತ್ಮಿಕ ಮರಣವು ಮನುಷ್ಯನು ದೇವರಿಂದ ಬೇರೆಯಾಗುವುದಾಗಿದೆ. ನಿತ್ಯಮರಣವು ನಿತ್ಯ

ವಾಗಿ ದೇವರಿಂದ ಬೇರೆಯಾಗಿರುವಂಥದ್ದಾಗಿದೆ (2 ಥೆಸಲೋನಿಕ 1:9).

ನಮ್ಮ ಜೀವನದಲ್ಲಿಯ ಪಾಪವು ಆತ್ಮಿಕ ಮರಣವನ್ನು ತರುತ್ತದೆ (ಎಫೆಸ 2:1). ಯೇಸುವಿನ ರಕ್ತದಿಂದ ತೆಗೆದು ಹಾಕಲ್ಪಡದಿದ್ದರೆ ಪಾಪವು ಅಂತಿಮವಾಗಿ ನಿತ್ಯಮರಣದಲ್ಲಿ ಪರಿಣಾಮಗೊಳ್ಳುತ್ತದೆ (ಪ್ರಕಟನೆ 20:14, 15). ಅವರು ತಮ್ಮ ಪಾಪದಲ್ಲಿ ಸಾಯುವದಾದರೆ ಆತನು ಹೋಗುವಲ್ಲಿಗೆ ಅವರು ಹೋಗಲಾರರು (ಅಂದರೆ ಪರಲೋಕಕ್ಕೆ; ಯೋಹಾನ 8:24; 14:2-6 ನೋಡಿರಿ) ಎಂದು ಯೇಸು ಜನರಿಗೆ ಹೇಳಿದನು.

ಜಗತ್ತಿಗೆ ಇಂದು ಅನೇಕ ಅಗತ್ಯತೆಗಳು ಇವೆ: ಸಮಾಧಾನ, ಕ್ಯಾನ್ಸರಿನಿಂದ ವಾಸಿಯಾಗುವಿಕೆ, ಹಸಿವೆಯಲ್ಲಿದ್ದವರಿಗೆ ಊಟ ಕೊಡುವ ಮಾರ್ಗ. ದೇವರು ಅಗತ್ಯವಾಗಿರುವುದೆ ಜಗತ್ತಿನ ಅತೀ ದೊಡ್ಡ ಅಗತ್ಯತೆಯಾಗಿದೆ. ಮನುಷ್ಯನು ತಾನು ಪಾಪಿಯೆಂದು ಒಪ್ಪಿಕೊಳ್ಳುವವರೆಗೆ ಮತ್ತು ತನ್ನನ್ನು ತಾನೇ ರಕ್ಷಿಸಿ ಕೊಳ್ಳಲಾರದೇ ಇರುವವರೆಗೆ ಅವನ ಪ್ರಾಣಕ್ಕೆ ಯಾವುದೇ ನಿರೀಕ್ಷೆ ಯಿರುವುದಿಲ್ಲ. ನಿಮ್ಮ ಕಳೆದು ಹೋದ ಪರಿಸ್ಥಿತಿಯನ್ನು ನೀವು ಒಪ್ಪಿ ಕೊಳ್ಳುವರೆಗೆ ನೀವು ರಕ್ಷಿಸಲ್ಪಡಲು ಸಿದ್ಧರಿಲ್ಲ ಎಂಬುದನ್ನು ಪುನಃ ಹೇಳುತ್ತೇನೆ.

ರಕ್ಷಣೆಗಾಗಿರುವ ನಿಮ್ಮ ಅಗತ್ಯತೆಯನ್ನು ನೀವು ಅರ್ಥ ಮಾಡಿಕೊಂಡರೆ, ಮುಂದೆ ಓದಿರಿ.

## ಕೃಪೆಯಿಂದ ರಕ್ಷಿಸಲ್ಪಟ್ಟದ್ದು

"Amazing Grace" ಎಂಬುದು ಬಹಳ ಪ್ರಸಿದ್ಧವಾದ ಹಾಡು. ಆದರೆ ಅದನ್ನು ಹಾಡುವ ಅನೇಕರು "ಕೃಪೆಯು" ಏನೆಂಬುದನ್ನು ತಿಳಿದಿರುವದಿಲ್ಲ. "ಕೃಪೆ" ಎಂದು ಭಾಷಾಂತರಿಸಲ್ಪಟ್ಟ ಪದವು "ವರ" ಎಂಬುದಾಗಿರುವ ಪದಕ್ಕೆ ಸಂಬಂಧಿಸಿದೆ. "ಕೃಪೆಯು" ವರವಾಗಿ ದಯಪಾಲಿಸಿದ್ದನ್ನು - ಬೇರೆ ಮಾತುಗಳಲ್ಲಿ, ಸಂಪಾದಿಸದೇ ಇರುವಂಥದ್ದನ್ನು ಸಂಬಂಧಿಸಿ ಹೇಳುತ್ತದೆ. "ಕೃಪೆ"ಯು "ಅಯೋಗ್ಯರಿಗೆ ತೋರಿಸುವ ದಯೆ" ಎಂದು ಕೆಲವು ಸಲ ವಿವರಿಸಲ್ಪಟ್ಟಿದೆ. "ನಿಮಗೆ ಅಗತ್ಯವಾದದ್ದು, ಆದರೆ ನೀವು ಹೊಂದಲು ಅರ್ಹರಲ್ಲ" ಎಂಬ ವಿವರಣೆಯನ್ನು ನಾನು ಮೆಚ್ಚಿಕೊಳ್ಳುತ್ತೇನೆ.

ನಾವು ಪಾಪಿಗಳಾಗಿರುವದರಿಂದ ನಮಗೆ ರಕ್ಷಣೆಯ ಅವಶ್ಯಕತೆಯಿದೆ. ಆದರೆ ನಾವು ರಕ್ಷಣೆಗೆ ಅರ್ಹರಲ್ಲ. ಹೀಗೆ ನಾವು ರಕ್ಷಿಸಲ್ಪಡಬೇಕಾದರೆ, ಅದು ದೇವರ ಕೃಪೆಯ ಮುಖಾಂತರವಾಗಿರತಕ್ಕದ್ದು. ಎಫೆಸ 2:8 ಹಾಗೂ ಇತರ ವಚನಗಳು ಕ್ರೈಸ್ತರು "ಕೃಪೆಯಿಂದ" ರಕ್ಷಿಸಲ್ಪಟ್ಟಿರುವರು ಎಂಬುದನ್ನು ಒತ್ತಿ ಹೇಳುತ್ತದೆ.

ದೇವರ ಕೃಪೆಯ ಅತೀ ದೊಡ್ಡದಾದ ಪ್ರಕಟಣೆಯು ಆತನ ಕುಮಾರ ನನ್ನು ದಾನವಾಗಿ ಕೊಟ್ಟದ್ದಾಗಿದೆ. ಈ ವಚನವು ಉಲ್ಲೇಖಿಲಸಲ್ಪಟ್ಟದ್ದನ್ನು ನೀವು ಕೇಳಿರಬಹುದು: "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಕುಮಾರನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಯೋಹಾನ 3:16). ದೇವರು ಲೋಕವನ್ನು ಬಹಳವಾಗಿ ಪ್ರೀತಿಸಿದನು - ದೇವರು ನಿಮ್ಮನ್ನು ಬಹಳವಾಗಿ ಪ್ರೀತಿಸಿದನು - ನಿಮ್ಮ ಪಾಪಗಳಿಗಾಗಿ ಸಾಯಲು ತನ್ನ ಕುಮಾರನಾದ ಯೇಸುವನ್ನು ಕೊಡಲು ಆತನಿಗೆ ಇಷ್ಟವಾಯಿತು. ನನಗೆ ಮೂವರು ಹೆಣ್ಣು ಮಕ್ಕಳೂ ಇಬ್ಬರು ಮೊಮ್ಮಕ್ಕಳೂ ಇರುವರು. ಆದರೆ ಅವರಲ್ಲಿ ಯಾರನ್ನೂ ಬಿಟ್ಟು ಕೊಡಲು

ನಾನು ಸಿದ್ಧನಿಲ್ಲ. ದೇವರಿಗೆ ಒಬ್ಬನೇ ಕುಮಾರನು. ಆದರೆ ದೇವರು ಆತನನ್ನು ನಮಗೆ ಕೊಟ್ಟನು.

"ನಾವು ಬಲಹೀನರಾಗಿದ್ದಾಗಲೇ (ನಿಸ್ಸಹಾಯಕರಾಗಿರುವಾಗ) ... ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು. ... ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ತೋರಿಸಿದ್ದಾನೆ" (ರೋಮಾಪುರ 5:6-8) ಎಂದು ಪೌಲನು ಬರೆದನು.

ಯೇಸು ಅನೇಕ ಕಾರಣಗಳಿಗಾಗಿ ಈ ಲೋಕದೊಳಗೆ ಬಂದನು: ದೇವರ ಬಗ್ಗೆ ನಮಗೆ ಬೋಧಿಸಲು (ಯೋಹಾನ 3:2), ಜನರಿಗೆ ಸಹಾಯ ಮಾಡಲು (ಮತ್ತಾಯ 20:28), ಅನುಸರಿಸಲು ಪರಿಪೂರ್ಣ ಉದಾಹರಣೆಯನ್ನು ಕೊಡಲು (1 ಪೇತ್ರ 2:21). ಆದರೆ ಅತೀ ಮುಖ್ಯವಾದದ್ದು, "ಕೆಟ್ಟು (ನಶಿಸಿ) ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ" ಆತನು ಬಂದದ್ದು (ಲೂಕ 19:10). ಆ ಉದ್ದೇಶವನ್ನು ಪೂರೈಸಲು ಆತನು ಶಿಲುಬೆಯ ಮೇಲೆ ಮರಣ ಹೊಂದುವದಾಗಿತ್ತು: "... ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ" (ಇಬ್ರಿಯ 9:22).

ಯೇಸುವು ತನ್ನ ರಕ್ತ ಸುರಿಸದಿದ್ದರೆ ಯಾಕೆ ಕ್ಷಮಾಪಣೆ ಇರುವದಿಲ್ಲ? ಆ ಪ್ರಶ್ನೆಗೆ ಉತ್ತರವು ದೇವರ ಸ್ವಭಾವದಲ್ಲಿ ಇರುತ್ತದೆ. ನಾವು ಸಂಪೂರ್ಣವಾಗಿ ದೇವರನ್ನು ಅರ್ಥ ಮಾಡಿಕೊಳ್ಳದಿದ್ದರೆ[7] ನಾವು ಸಂಪೂರ್ಣವಾಗಿ ಆತನ ಯೋಜನೆಗಳನ್ನೂ ಉದ್ದೇಶಗಳನ್ನೂ - ಶಿಲುಬೆಯಲ್ಲಿ ಒಳಗೊಂಡ ಎಲ್ಲದರೊಂದಿಗೆ ಅರ್ಥಮಾಡಿಕೊಳ್ಳಲಾರೆವು (1 ಕೊರಿಂಥ 2:16). ಪ್ರಶ್ನೆಯನ್ನು ಯೋಚಿಸುವದರಲ್ಲಿ ಇನ್ನೂ ಬೆಲೆಯಿರುವುದು.

ಈ ಭಾವಗಳನ್ನು ಯೋಚಿಸಿರಿ: ದೇವರು ನೀತಿಯುಳ್ಳ ದೇವರು (ಕೀರ್ತನೆ 89:14). ಪವಿತ್ರನಾದ ದೇವರಾಗಿ ಆತನು ಪಾಪವನ್ನು ಸಹಿಸಲಾರನು (ಯೇಶಾಯ 6:3); ನ್ಯಾಯವಂತನಾಗಿರಲು ಆತನು ಪಾಪವನ್ನು ದಂಡಿಸತಕ್ಕದ್ದು. ದೇವರು ಪ್ರೀತಿಯ ದೇವರಾಗಿರುವದರಿಂದ ನಾವು ದೇವರಿಗೆ ಕೃತಜ್ಞತೆಯುಳ್ಳವರಾಗಿರಬೇಕು (1 ಯೋಹಾನ 4:8). ಆತನು ಕೇವಲ ನ್ಯಾಯವುಳ್ಳ ದೇವರಾಗಿದ್ದರೆ ನಾವೆಲ್ಲರೂ ನಾಶವಾಗುತ್ತಿದ್ದವು. ಯಾಕಂದರೆ ನಾವೆಲ್ಲರೂ ಪಾಪಮಾಡಿದ್ದೇವೆ. ಪ್ರೀತಿಯ ದೇವರಾಗಿ, ಆತನು ಯಾರಾದರೂ ನಾಶವಾಗಬೇಕೆಂದು ಇಚ್ಛಿಸುವದಿಲ್ಲ (2 ಪೇತ್ರ 3:9). ಆದುದರಿಂದ ನಮ್ಮ ಬದಲಾಗಿ ಶ್ರಮೆಯನ್ನು ತಾಳಲು ಆತನು ತನ್ನ ಕುಮಾರನನ್ನು ಕಳುಹಿಸಿದನು. ನಂಬಿಕೆಯಿಂದ ಯೇಸುವು ಶಿಲುಬೆಯ ಮೇಲೆ ಮರಣ ಹೊಂದಿದಾಗ, ನನ್ನ ಪಾಪಗಳಿಗಾಗಿಯೂ ನಿನ್ನ ಪಾಪಗಳಿಗಾಗಿಯೂ ಆತನು ಶಿಕ್ಷೆಯನ್ನು ಸ್ವೀಕರಿಸಿದನು ಎಂಬ ಸಂಗತಿಯನ್ನು ಸ್ವೀಕರಿಸಿದ್ದೇವೆ.

> ... ಬರಹದ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು (1 ಕೊರಿಂಥ 15:3).
>
> ನಾವು ಆತನಲ್ಲಿ ದೇವರ ನೀತಿಯಾಗುವಂತೆ ದೇವರು ಪಾಪವನ್ನರಿಯದ ಆತನನ್ನು ನಮಗೋಸ್ಕರ ಪಾಪವಾಗ ಮಾಡಿದನು (2 ಕೊರಿಂಥ 5:21).
>
> ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನು ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷವನ್ನು ಯೆಹೋವನು ಅವನ ಮೇಲೆ ಹಾಕಿದನು (ಯೆಶಾಯ 53:6).

ಯೇಸುವು ಕೇವಲ ಮನುಷ್ಯನಾಗಿದ್ದರೆ, ಪರಿಪೂರ್ಣ ಮನುಷನೇ ಆಗಿದ್ದರೆ, ಆತನ ಮರಣವು ಎಂದೂ ಪಾಪಕ್ಕಾಗಿ ಪ್ರಾಯಶ್ಚಿತ್ತವಾಗಿರುತ್ತಿರಲಿಲ್ಲ. ಎಲ್ಲಾ ಮಾನವ ಜನಾಂಗದ ಪಾಪಗಳನ್ನು ತನ್ನ ಮೇಲೆ ತೆಗೆದು ಕೊಳ್ಳ ಬಲ್ಲ ಕೇವಲ ಒಬ್ಬಾತನು ಪಾಪರಹಿತ ದೇವರ ಕುಮಾರನು. ಅನೇಕ ದೊಡ್ಡ ಧಾರ್ಮಿಕ ನಾಯಕರು ಇರುವರು ಆದರೆ ಕೇವಲ ಒಬ್ಬನೇ ರಕ್ಷಕನಿರುವನು: ಆತನು ಯೇಸು ಕ್ರಿಸ್ತನು. "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹನ 14:6) ಎಂದು ಹೇಳಿದ್ದಾನೆ.[8]

ನೀವು ರಕ್ಷಿಸಲ್ಪಡುವ ಮೊದಲು ಈ ಮಹತ್ವದ ಸತ್ಯಗಳನ್ನು ನೀವು ಸ್ವೀಕರಿಸತಕ್ಕದ್ದು: (1) ಯೇಸುವು ದೈವೀಯ ದೇವರ ಕುಮಾರನಾಗಿದ್ದಾನೆ.[9] (2) ನಿಮಗಾಗಿ ಕ್ರಿಸ್ತನು ಶಿಲುಬೆಯ ಮೇಲೆ ಮರಣ ಹೊಂದಿದನು. (3) ನಿಮ್ಮಷ್ಟಕ್ಕೆ ನೀವೇ ನಿಮ್ಮನ್ನು ರಕ್ಷಿಸಿಕೊಳ್ಳಲಾರಿರಿ. ಯೇಸುವಿನ ಯಜ್ಞದ ಮುಖಾಂತರವಾಗಿ ಮಾತ್ರವೇ ನೀವು ರಕ್ಷಿಸಲ್ಪಡುವಿರಿ.

## ಮುಕ್ತಾಯ

ನೀವು ಎಷ್ಟು ವಿದ್ಯಾವಂತರಾಗಿರುವಿರಿ, ಅವಿದ್ಯಾವಂತರಾಗಿರುವಿರಿ, ನೀವು ಎಷ್ಟು ಐಶ್ವರ್ಯವಂತರಾಗಿರುವಿರಿ, ಬಡವರಾಗಿರುವಿರಿ, ನೀವು ಎಷ್ಟು ಆಕರ್ಷಣೆಯುಳ್ಳವ ರಾಗಿರುವಿರಿ ಇಲ್ಲವೇ ಆಕರ್ಷಣೆಯಿಲ್ಲದವರಾಗಿರುವಿರಿ, ನಿನ್ನ ಚರ್ಮ ಕಪ್ಪಗಿರುವುದೋ ಬೆಳ್ಳಗಾಗಿರುವುದೋ, ನೀವೆಷ್ಟು ಜಯಶಾಲಿಗಳಾಗಿರುವಿರಿ ಇಲ್ಲವೇ ಸೋತು ಹೋಗಿ ರುವಿರಿ (ಜನರ ಅಳತೆಯ ಪ್ರಕಾರ) ಎಂಬುದು ಯಾವದೇ ರೀತಿಯ ಭಿನ್ನತೆಯನ್ನು ಉಂಟು ಮಾಡುವದಿಲ್ಲ. ದೇವರು ನಿನ್ನನ್ನು ಪ್ರೀತಿಸುತ್ತಾನೆ. ಆತನು ತನ್ನ ಕುಮಾರನನ್ನು ನಿನಗಾಗಿ ಸಾಯಲು ಕಳುಹಿಸಿಕೊಟ್ಟನು. ಆತನು ನಿನ್ನನ್ನು ಪ್ರೀತಿಸುತ್ತಾನೆ. ನೀನು ಮೊದಲು ಹೀಗೆ ಮಾಡಿರದಿದ್ದರೆ, ಈಗ ನಿಂತುಕೊಂಡು ಶಿಲುಬೆಯ ಮೇಲಿನ ಯೇಸುವಿನ ಮರಣ ಮತ್ತು ಆತನ ಪುನರುತ್ಥಾನದ ಬಗ್ಗೆ ಇರುವ ಬರಹಗಳನ್ನು ಓದಲು ಪ್ರಾರಂಭಿಸಬಹುದು (ಮತ್ತಾಯ 26-28; ಮಾರ್ಕ 14-16; ಲೂಕ 22-24; ಯೋಹಾನ 18-21).

"ನಾನು ಜೀವಿಸುವುದು ... ದೇವ ಕುಮಾರನ ಮೇಲನ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" (ಗಲಾತ್ಯ 2:20ಬಿ) ಎಂದು ಪೌಲನು ಬರೆದಿದ್ದಾನೆ. ಈ ಮಾತುಗಳನ್ನು ಗಟ್ಟಿಯಾಗಿ ಹೇಳಿರಿ: "ಯೇಸುವು ನನ್ನನ್ನು ಪ್ರೀತಿಸುತ್ತಾನೆ ಹಾಗೂ ಆತನು ನನಗಾಗಿ ತನ್ನನ್ನೇ ಒಪ್ಪಿಸಿಕೊಟ್ಟನು" ಈ ಪದಗಳ ರುಚಿ ನೋಡಿರಿ. ಅವು ನಿಜವಾಗಿಯೂ ಸತ್ಯವಾಗಿವೆ.

---

ಟಿಪ್ಪಣಿಗಳು

[1]ಉದಾಹರಣೆಯಾಗಿ, ಒಬ್ಬ ಮನುಷ್ಯನು ಭಯಂಕರವಾದ ಅಪರಾಧ ಮಾಡಿದನು. ಅವನ ಮಕ್ಕಳು ನಾಚಿಕೆಯನ್ನೂ ಅಪಮಾನವನ್ನೂ (ಅವನ ಕಾರ್ಯದ ಪರಿಣಾಮ) ಅನುಭವಿಸುವರು. ಆದರೆ ಅವನು ಮಾತ್ರವೇ ಆ ಅಪರಾಧಕ್ಕಾಗಿ ಸೆರೆಮನೆಗೆ ಹೋಗ ಬೇಕಾಗುತ್ತದೆ (ಅವನು ಮಾತ್ರವೇ ಅಪರಾಧಿಯಾಗಿರುವನು). [2]ಯೆಹೂದಿ ಬಾಲಕನಿಗೆ ಅವನ bar mitzvah ಆಚರಣೆ ಅವನ ಹದಿಮೂರನೆಯ ಜನ್ಮ ದಿನದಂದು ಆಚರಿಸಲ್ಪಡುತ್ತದೆ ("bar mitzvah" ಅಂದರೆ "ಆಜ್ಞೆಯ ಇಲ್ಲವೇ ಧರ್ಮಶಾಸ್ತ್ರದ ಮಗನು" ಎಂದರ್ಥವಾಗುತ್ತದೆ).

ಯೇಸು ಹನ್ನೆರಡು ವರುಷದವನಾಗಿದ್ದಾಗ ಪಸ್ಕ ಹಬ್ಬಕ್ಕೆ ಹೋದನು (ಲೂಕ 2:41, 42). [3]ಸ್ಪಷ್ಟನೆ ನನ್ನದು. [4]ವಿವಿಧ ಗ್ರೀಕ ಪದಗಳು ಭಿನ್ನವಾದ ಭಾಷಾಂತರಗಳಲ್ಲಿ "transgression" ಎಂದು ಹೇಳಲ್ಪಟ್ಟಿದೆ. ಆದರೆ ಗಲಾತ್ಯ 3:19ರಲ್ಲಿ ಉಪಯೋಗಿಸಲ್ಪಟ್ಟ ಗ್ರೀಕ ಪದವನ್ನು ಸಂಬಂಧಿಸಿ ಹೇಳುತ್ತೇನೆ. ಅದರ ಅರ್ಥ ಇಂಗ್ಲೀಷ ಪದದಂತೆಯೇ ಇರುವುದು. [5]ರೋಮಾಪುರ 7:19, 20 ನೋಡಿರಿ. [6]ಪಾಪಕ್ಕಾಗಿರುವ ಇನ್ನೊಂದು ಸಮಾನ ಪದ "ಆಜ್ಞಾತಿಕ್ರಮ" (1 ಯೋಹಾನ 3:4 ಆಧುನಿಕ ಭಾಷಾಂತರ ನೋಡಿರಿ). ಈ ಪದದ ಅರ್ಥ "(ದೇವರ) ಧರ್ಮಶಾಸ್ತ್ರಕ್ಕೆ ವಿರುದ್ಧ ವಾಗಿ ಹೋಗುವುದು" ಎಂದಾಗುತ್ತದೆ. "ದುಷ್ಟತ್ವ" ಹಾಗೂ "ಅವಿಧೇಯತೆ" ಯಂಥ ಇತರ ಸಮಾನಾರ್ಥ ಪದಗಳಿವೆ; ಆದರೆ ನಾನು "ಪಾಪ," "ಅತಿಕ್ರಮಣ" ಹಾಗೂ "ಅಪರಾಧ" ಎಂಬ ಪದಗಳನ್ನು ಪಾಪದ ವ್ಯಾಪ್ತಿಯನ್ನು ಉದಹರಿಸಲು ಆಯ್ಕೆ ಮಾಡಿಕೊಂಡಿದ್ದೇನೆ. [7]ದೇವರನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಲಿಕ್ಕೆ ನಾವು ದೇವರಾಗಿರ ಬೇಕಾಗಿತ್ತು. [8]ಓರೆ ಅಕ್ಷರಗಳನ್ನು ಉಪಯೋಗಿಸುವದರಿಂದ ಸೂಚಿಸಲ್ಪಡುವ ಒತ್ತು ಕೊಡುವಿಕೆಯು ಮೂಲ ಪಾಠದಲ್ಲಿ ಕಂಡುಬರುತ್ತದೆ. [9]ಇದು ಯೇಸುವಿನ ಪುನರುತ್ಥಾನದಲ್ಲಿ ವಿಶ್ವಾಸವನ್ನು ಒಳಗೊಂಡಿರುತ್ತದೆ (ರೋಮಾಪುರ 10:9 ನೋಡಿರಿ). ಪುನರುತ್ಥಾನವು ರೋಮಾಂಚನ ಕಾರಿಯಾದ ಅಧ್ಯಯನವಾಗಿರುವದರಿಂದ ಅದರ ಬಗ್ಗೆ ನಮ್ಮ ಹೆಚ್ಚಿನ ಸಮಯ ಕಳೆಯಲು ಸ್ಥಳಾವಕಾಶವಿಲ್ಲ. ಯೇಸುವು ದೈವೀಯ ನಾಗಿರುವುದು ನಿಮಗೆ ನಿಶ್ಚಿತತೆಯಿಲ್ಲದಿದ್ದರೆ ಈ ಪ್ರಾಮುಖ್ಯವಾದ ವಿಷಯವನ್ನು ನೀವು ಅಧ್ಯಯನ ಮಾಡಲು ಬಯಸುವಿರಿ. ನೀವು ಹಾಗೆ ಮಾಡಿರದಿದ್ದರೆ, "ನಂಬಲಿಕ್ಕೆ ಸವಾಲು" ಎಂಬ ಅನುಬಂಧ ಪಾಠವನ್ನು ಓದಿರಿ. ಈ ಪುಸ್ತಕವನ್ನು ನಿಮಗೆ ಕೊಟ್ಟವರೊಂದಿಗೆ ಇದನ್ನು ಚರ್ಚಿಸಲು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಯೇಸುವಿನ ಬಗ್ಗೆ ಬೈಬಲ್ ಹೇಳುವದರೊಂದಿಗೆ ಹೆಚ್ಚು ಪರಿಚಯವುಳ್ಳವರಾಗಿರುವುದು ನಿಮ್ಮ ಪ್ರಾಥಮಿಕ ಅಗತ್ಯತೆಯ ಸಾಧ್ಯತೆಯಿದೆ (ಯೋಹಾನ 20:30, 31; ನೋಡಿರಿ). ಯೇಸುವಿನಲ್ಲಿ ನಿಮ್ಮ ವಿಶ್ವಾಸವನ್ನು ಬಲಪಡಿಸಲು, ಯೇಸುವಿನ ಜೀವನದ ಬಗ್ಗೆ ಹೇಳಿದ ಹೊಸ ಒಡಂಬಡಿಕೆಯ ಮೊದಲಿನ ನಾಲ್ಕು ಪುಸ್ತಕಗಳನ್ನು ಓದಲು ಸಾಧ್ಯವಾದಷ್ಟು ಸಮಯ ಕಳೆಯಿರಿ.

© 2009 Truth for Today